# ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.

**ಮಾನ್ಯ ಠೇವಣಿದಾರರ ಗಮನಕ್ಕೆ,**

**ವಿಷಯ: ಮಾಹಿತಿ ಪತ್ರ.**

ತಮಗೆ ತಿಳಿದಿರುವಂತೆ ಈವರೆಗೆ ಸಹಕಾರಿ ಬ್ಯಾಂಕಿನಲ್ಲಿ ಠೇವಣಿ ಹೊಂದಿದ ಸದಸ್ಯರಿಗೆ ಟಿ.ಡಿ.ಎಸ್. (Tax Deducted at Source ) ಕಡಿತಮಾಡುತ್ತಿರಲಿಲ್ಲ. ಆದಾಯಕರ ಕಾನೂನು ಸೆಕ್ಷನ್ 194A (3)(v) ನಲ್ಲಿ ಈ ವಿನಾಯಿತಿ ಇದೆ ಎಂದು ವ್ಯಾಖ್ಯಾನಿಸಲಾಗಿತ್ತು. ಆದರೆ ಕೇಂದ್ರ ಸರ್ಕಾರ ಪ್ರಸಕ್ತ ಸಾಲಿನಲ್ಲಿ ಆದಾಯಕರ ಕಾನೂನು ಸೆಕ್ಷನ್ 194 A ಕಾಯ್ದೆಗೆ ತಿದ್ದುಪಡಿ ತಂದಿದ್ದು ಇದರ ಅನ್ವಯ ಸಹಕಾರಿ ಬ್ಯಾಂಕಿನ ಸದಸ್ಯರು ಮತ್ತು ಎಲ್ಲಾ ಠೇವಣಿದಾರರು ಪಡೆಯುವ ವಾರ್ಷಿಕ ಬಡ್ಡಿ ಹಣ ರೂ 10000/- ಕ್ಕಿಂತ ಹೆಚ್ಚಾದಲ್ಲಿ ಆದಾಯಕರ ಕಡಿತ ಮಾಡಿಯೇ ನೀಡಬೇಕೆಂದು ನಿರ್ದೇಶಿಸಿರುತ್ತಾರೆ ಹಾಗೂ ಸದರಿ ಟಿ.ಡಿ.ಎಸ್. (Tax Deducted at Source) ಮೊತ್ತವನ್ನು ಆದಾಯತರಿಗೆ ಇಲಾಖೆಗೆ ವಿವರಗಳ ಸಹಿತ ಆಗಿಂದಾಗ್ಗೆ ಪಾವತಿಸಲು ಸಹಾ ಬ್ಯಾಂಕುಗಳಿಗೆ ಆದೇಶ ನೀಡಲಾಗಿದೆ,

1) ಸದರಿ ತಿದ್ದುಪಡಿ ದಿನಾಂಕ 1/06/2015 ರಿಂದ ಜಾರಿಗೆ ಬರಲಿದ್ದು, ಬ್ಯಾಂಕು ನೀಡುವ ಬಡ್ಡಿಮೊತ್ತಕ್ಕೆ ಟಿ.ಡಿ.ಎಸ್ ಮಾಡಬೇಕಾದ ಅನಿವಾರ್ಯತೆ ಉಂಟಾಗಿದ್ದು ನಾವು ಇದಕ್ಕೆ ಬದ್ದರಾಗಿದ್ದೇವೆ.

2) ನಿಮ್ಮ ಬಡ್ಡಿಯ ಆದಾಯವು ರೂ.10000.00 ಕ್ಕಿಂತ ಹೆಚ್ಚಿದ್ದಲ್ಲಿ PAN No. ಸಹಿತ ನೀಡಿದರೆ ಶೇ10% ಆದಾಯ ತೆರಿಗೆ ಕಡಿತಗೊಳ್ಳುವುದು, PAN No. ಇಲ್ಲದ್ದಿದ್ದಲ್ಲಿ ಶೇ20% ಆದಾಯ ತೆರಿಗೆ ಕಡಿತಗೊಳಿಸಲಾಗುವುದು.

3) ನಿಮ್ಮ ಎಲ್ಲಾ ಮೂಲದ ಒಟ್ಟು ಆದಾಯವು ತೆರಿಗೆ ಮೊತ್ತದ ಮಿತಿ (taxable limit) ಗಿಂತ ಕಡಿಮೆ ಇದ್ದಲ್ಲಿ 15G ಮತ್ತು 15H (ತಮಗೆ ಅನ್ವಯವಾಗುವಂತೆ) ಫಾರಂಗಳನ್ನು PAN No. ಸಹಿತ ಪ್ರತಿ ವರ್ಷ ಕಡ್ಡಾಯವಾಗಿ ನೀಡಬೇಕಾಗಿರುತ್ತದೆ ಇಲ್ಲದಿದ್ದ ಪಕ್ಷದಲ್ಲಿ ನಾವು ಟಿ.ಡಿ.ಎಸ್ ಮಾಡುವ ಅನಿವಾರ್ಯತೆ ಇರುತ್ತದೆ.

4) ಫಾರಂ 15G ಮತ್ತು 15H ಅನ್ವಯವಾಗದಿದ್ದಲ್ಲಿ ಹಾಗು ನಿಮ್ಮ ಬಡ್ಡಿಯ ಆದಾಯವು ರೂ.10000.00 ಕ್ಕಿಂತ ಹೆಚ್ಚಿದ್ದಲ್ಲಿ PAN No. ಸಹಿತ ನೀಡಿದರೆ ಶೇ10% ಆದಾಯ ತೆರಿಗೆ ಕಡಿತಗೊಳ್ಳುವುದು, PAN No. ಇಲ್ಲದ್ದಿದ್ದಲ್ಲಿ ಶೇ20% ಆದಾಯ ತೆರಿಗೆ ಕಡಿತಗೊಳಿಸಲಾಗುವುದು.

5) **ವಿಷೇಶ ಸೂಚನೆಗಳು:–**

i) ಠೇವಣಿದಾರರು ತಮ್ಮ ಸದಸ್ಯತ್ವ ಸಂಖ್ಯೆ, ಪಾನ್ (PAN) ಸಂಖ್ಯೆ, ವಿಳಾಸ ಧೃಢೀಕರಣ ಪತ್ರ, ಆಧಾರ್ ಸಂಖ್ಯೆ ಮತ್ತು ತಮ್ಮ ಮೊಬೈಲ್ ದೂರವಾಣಿ ಮತ್ತು ಸ್ಥಿರ ದೂರವಾಣಿ ಸಂಖ್ಯೆಯನ್ನು ಸಲ್ಲಿಸದಿದ್ದಲ್ಲಿ ಸಂಬಂಧಪಟ್ಟ ಶಾಖೆಯಲ್ಲಿ ಕಡ್ಡಾಯವಾಗಿ ಸಲ್ಲಿಸುವುದು.

ii) ಭಾರತೀಯ ರಿಸರ್ವ ಬ್ಯಾಂಕಿನ ನಿರ್ದೇಶನದಂತೆ ಒಬ್ಬ ಗ್ರಾಹಕ ಒಂದು ಗ್ರಾಹಕ ಗುರುತು (Customer ID) ಸಂಖ್ಯೆಯನ್ನು ಮಾತ್ರ (De-duplication of Customer File & Allotment Unique Customer Code) ಹೊಂದುವುದು ಅನಿವಾರ್ಯವಾಗಿದ್ದು, ಒಂದು ಪಕ್ಷ ನಿಮಗೆ ಹಲವು ಗ್ರಾಹಕ ಸಂಖ್ಯೆಗಳನ್ನು ನೀಡಿದ್ದಲ್ಲಿ ಕೂಡಲೇ ಸಂಬಂಧಪಟ್ಟ ಶಾಖೆಯನ್ನು ಸಂಪರ್ಕಿಸುವುದು.

ಹೆಚ್ಚಿನ ಮಾಹಿತಿಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ.

*** ** ***